# ಕರ್ನಾಟಕ ವಿಧಾನ ಪರಿಷತ್ತು

ಸಂಖ್ಯೆ:ಕವಿಪ/ಆ-1/52/ಸು/2021

ವಿಧಾನ ಪರಿಷತ್ತಿನ ಸಚಿವಾಲಯ,
ಅಂಚೆ ಪೆಟ್ಟಿಗೆ ಸಂಖ್ಯೆ:5079, ವಿಧಾನ ಸೌಧ,
ಬೆಂಗಳೂರು-560 001,**ದಿನಾಂಕ:29.10.2022**

## ಸುತ್ತೋಲೆ

ವಿಷಯ: ದಿವಂಗತ ಸರ್ದಾರ್ ವಲ್ಲಭಭಾಯ್ ಪಟೇಲ್ ರವರ ಜನ್ಮದಿನದ ಪ್ರಯುಕ್ತ ದಿನಾಂಕ:31.10.2022 ರಂದು ರಾಷ್ಟ್ರೀಯ ಏಕತಾ ದಿನವನ್ನಾಗಿ ಆಚರಿಸುವ ಬಗ್ಗೆ.

ಉಲ್ಲೇಖ: ಕರ್ನಾಟಕ ಸರ್ಕಾರದ ಪತ್ರದ ಸಂಖ್ಯೆ:ಸಿಆಸುಇ:3:ಪಿಹೆಚ್ಎಲ್:2022, ದಿನಾಂಕ:21.10.2022.

******

ಉಲ್ಲೇಖಿತ ಪತ್ರದನ್ವಯ ದಿನಾಂಕ:31.10.2022 ರಂದು ದಿವಂಗತ ಸರ್ದಾರ್ ವಲ್ಲಭಭಾಯ್ ಪಟೇಲ್ ರವರ ಜನ್ಮದಿನದ ಪ್ರಯುಕ್ತ **"ರಾಷ್ಟ್ರೀಯ ಏಕತಾ ದಿವಸ"** ಹಾಗೂ ಈ ವರ್ಷ ವಿಶೇಷವಾಗಿ 75 ವರ್ಷಗಳ ಪ್ರಗತಿಪರ ಭಾರತ ಮತ್ತು ಜನರು, ಸಂಸ್ಕೃತಿ ಮತ್ತು ಸಾಧನೆಗಳ ವೈಭವಯುತ ಇತಿಹಾಸವನ್ನು ಆಚರಿಸಿ ಸ್ಮರಿಸುವ ಸಲುವಾಗಿ **"ಆಜಾದಿಕ ಅಮೃತ್ ಮಹೋತ್ಸವ"**ವನ್ನು ಆಚರಿಸಲು ನಿರ್ಧರಿಸಲಾಗಿದೆ.

ಆದುದರಿಂದ, **"ರಾಷ್ಟ್ರೀಯ ಏಕತಾ ದಿವಸ"ದ ಆಚರಣೆಯ ಸಂಬಂಧ ಪ್ರಮಾಣ ವಚನ ಸ್ವೀಕರಿಸಲು ದಿನಾಂಕ:31.10.2022ರಂದು ವಿಧಾನ ಸೌಧದ ಮೊದಲನೇ ಮಹಡಿಯಲ್ಲಿರುವ ಸೆಂಟ್ರಲ್ ಹಾಲ್‌ನಲ್ಲಿ ಬೆಳಗ್ಗೆ:11.00 ಗಂಟೆಗೆ** ಈ ಸಚಿವಾಲಯದ ಎಲ್ಲಾ ಅಧಿಕಾರಿ/ನೌಕರರುಗಳು ಕಡ್ಡಾಯವಾಗಿ ಭಾಗವಹಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.(ರಾಷ್ಟ್ರೀಯ ಏಕತಾ ದಿವಸದ ಪ್ರತಿಜ್ಞೆ ಮಾಡುವುದಕ್ಕಾಗಿ ಪುಟ ತಿರುಗಿಸಿ ನೋಡಿ)

29/10/22

**(ಕೆ.ಜೆ. ಜಲಜಾಕ್ಷಿ)**
ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

ಗೆ,

ವಿಧಾನ ಪರಿಷತ್ತಿನ ಎಲ್ಲಾ ಅಧಿಕಾರಿ/ನೌಕರರುಗಳಿಗೆ (ಶಾಸಕರ ಭವನವು ಸೇರಿದಂತೆ)

<u>ಪ್ರತಿಗಳು:</u>

1. ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿಯವರಿಗೆ, ಕವಿಪ
2. ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರಿಗೆ, ಕವಿಪ.
3. ಅಪರ/ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರಿಗೆ, ಕವಿಪ.
4. ಕರ್ನಾಟಕ ವಿಧಾನ ಪರಿಷತ್ತು ಹಾಗೂ ಶಾಸಕರ ಭವನದ ಸೂಚನಾ ಫಲಕಗಳಿಗೆ,ಕವಿಪ.
5. ರಕ್ಷಾ ಕಡತಕ್ಕೆ/ಸೂಚನಾ ಫಲಕಕ್ಕೆ/ಬಿಡಿ ಪ್ರತಿಗಳು.

<u>ರಾಷ್ಟ್ರೀಯ ಏಕತಾ ದಿವಸದ ಪ್ರತಿಜ್ಞೆ</u>

"ರಾಷ್ಟ್ರದ ಐಕ್ಯತೆ, ಸಮಗ್ರತೆ ಮತ್ತು ಭದ್ರತೆಯನ್ನು ಕಾಪಾಡಲು ನನ್ನನ್ನು ಅರ್ಪಿಸಿಕೊಳ್ಳುತ್ತೇನೆ ಮತ್ತು ನನ್ನ ದೇಶ ಬಾಂಧವರಲ್ಲಿ ಈ ಸಂದೇಶವನ್ನು ಸಾರಲು ಶ್ರಮಿಸುತ್ತೇನೆ ಎಂದು ನಾನು ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ. ಸರ್ದಾರ್ ವಲ್ಲಭಭಾಯ್ ಪಟೇಲ್‌ರವರ ದೂರದೃಷ್ಟಿ ಮತ್ತು ಕಾರ್ಯಕ್ಷಮತೆಯಿಂದ ಸಾಧಿಸಿದ ರಾಷ್ಟ್ರೀಯ ಏಕೀಕರಣದ ಸ್ಫೂರ್ತಿಯನ್ನು ಕಾಪಾಡುತ್ತೇನೆ ಎಂದು ಪ್ರಮಾಣ ಮಾಡುತ್ತೇನೆ. ರಾಷ್ಟ್ರದ ಆಂತರಿಕ ಭದ್ರತೆಯನ್ನು ಖಾತ್ರಿ ಪಡಿಸಲು ನಾನು ನನ್ನದೇ ಆದ ಕೊಡುಗೆಯನ್ನು ನೀಡುತ್ತೇನೆ ಎಂದು ಒಮ್ಮನಸ್ಸಿನಿಂದ ಪ್ರತಿಜ್ಞೆ ಮಾಡುತ್ತಿದ್ದೇನೆ"